| O.S 17/2019 | PW-4 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 10.10.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು:– ಪ್ರತಿವಾದಿ ಪರ ವಕೀಲರಾದಃ ಶ್ರೀ KBSS ರವರಿಂದ:–**

ನಾನು, ವಾದಿ ಮತ್ತು ಪ್ರತಿವಾದಿಯರು ಒಂದೇ ಗ್ರಾಮಸ್ಥರು ಎಂದರೆ ನಿಜ. ನಾನು ಸುತ್ತೂರಿನಲ್ಲಿ ಮೊಬೈಲ್ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ ಎಂದರೆ ನಿಜ. ಅಂದಾಜು 10 ವರ್ಷಗಳಿಂದ ನಾನು ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. ನಾನು ಅಂಗಡಿಗೆ ಬೆಳಿಗ್ಗೆ ಹೋದರೆ ಸಂಜೆ 7 ಗಂಟೆಗೆ ಬರುತ್ತೇನೆ ಎಂದರೆ ನಿಜ.

ವಾದಿಯ ತಂದೆಯ ಹೆಸರು ದೊಡ್ಡಸಿದ್ದಪ್ಪ. ಪ್ರತಿವಾದಿಯ ತಂದೆಯ ಹೆಸರು ಪುಟ್ಟಸಿದ್ದಪ್ಪ . ವಾದಿಯ ತಂದೆ ಮತ್ತು ಪ್ರತಿವಾದಿಯ ತಾತ ಅಣ್ಣ ತಮ್ಮಂದಿರು ಎಂದರೆ ನಿಜ. ವಾದಿಯ ತಂದೆ ಮತ್ತು ಪ್ರತಿವಾದಿಯ ತಾತ ಇವರು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ವಿಭಾಗ ಮಾಡಿಕೊಂಡಿರುವ ಬಗ್ಗೆ ಯಾವುದಾದರೂ ದಾಖಲಾತಿಗಳನ್ನು ನಾನು ನೋಡಿಲ್ಲ. ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಆಸ್ತಿಗಳು ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯು ಪ್ರತಿವಾದಿಯ ವಿರುದ್ಧ ಈ ದಾವೆಯನ್ನು ನಿವೇಶನದಲ್ಲಿರಿರು ಶೆಡ್ ನ ಜಾಗಕ್ಕಾಗಿ ದಾವೆಯನ್ನು ಹೂಡಿರುತ್ತಾರೆ. ದಾವಾ ಆಸ್ತಿಯ ಸಂಖ್ಯೆ ಗೊತ್ತಿಲ್ಲ. ಪೂರ್ವ ಪಶ್ಚಿಮ 24 ಅಡಿ ಮತ್ತು ಉತ್ತರ ದಕ್ಷಿಣ 90 ಅಡಿ ವಿಸ್ತೀರ್ಣ ಇರುತ್ತದೆ. ಸಾಕ್ಷಿಗೆ ನಿಪಿ- 10 ದಾಖಲಾತಿಯನ್ನು ತೋರಿಸಿದ್ದು ಸದರಿ ಪೋಟೋದಲ್ಲಿ ಕಾಣಿಸುತ್ತಿರುವ ದಾವಾ ಆಸ್ತಿ ಎಂದು ಒಪ್ಪಿರುತ್ತಾರೆ. ಶೆಡ್ ನ ಪಕ್ಕದಲ್ಲಿರುವ ನಿವೇಶನ ವಾದಿಗೆ ಸೇರಿಕೊಂಡಿರುತ್ತದೆ ಎಂದರೆ ನಿಜ.

ವಾದಿಯು ಸುಮಾರು 10–20 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಅವರ ಕುಟುಂಬದವರು ಇಲ್ಲಿಯೇ ವಾಸವಿದ್ದು ವಾದಿಯು ಹೋಗಿ ಬರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಮತ್ತು ವಾದಿಯ ಕುಟುಂಬಸ್ತರು ಬೆಂಗಳೂರಿನಿಂದ ಬಂದು ದಾವಾ ಆಸ್ತಿಯಲ್ಲಿರುವ ಶೆಡ್ ನಲ್ಲಿ ವಾಸವಿದ್ದು ಹೋಗುತ್ತಾರೆ ಎಂದರೆ ನಿಜ.

| O.S 17/2019 | PW-4 |
|---|---|

ಸಾಕ್ಷಿಗೆ ನಿಜಿ-1 ಫೋಟೋವನ್ನು ತೋರಿಸಿದ್ದು ಸದರಿ ಫೋಟೋದಲ್ಲಿ ಕಾಣಿಸುತ್ತಿರುವ ವ್ಯಕ್ತಿಗಳು ತಂದೆ ತಾಯಿ ಎಂದು ಗುರುತಿಸುತ್ತಾರೆ ಮತ್ತು ಅವರು ಮೃತಪಟ್ಟಿರುತ್ತಾರೆ. ನಿಜಿ 2 ರಲ್ಲಿ ಕಾಣಿಸುತ್ತಿರುವ ವ್ಯಕ್ತಿಗಳು ಪ್ರತಿವಾದಿ ಮತ್ತು ಅವರ ತಾಯಿ ಎಂದು ಗುರುತಿಸಿರುತ್ತಾರೆ.

ಸುಮಾರು 10 ವರ್ಷಗಳ ಹಿಂದೆ ಪ್ರತಿವಾದಿಯವರ ತಂದೆ ಸಿದ್ದಲಿಂಗಪ್ಪರವರಿಗೆ ಹತ್ತು ಸಾವಿರ ಸಾಲ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ನಮ್ಮ ಕುಟುಂಬದವರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ಪ್ರತಿವಾದಿಯ ತಂದೆ ಕೊಟ್ಟಿಲ್ಲದೆ ಇರುವ ಕಾರಣ ತಂಟೆ ತಕರಾರು ಆಗಿತ್ತು ಎಂದರೆ ನಾನು ಆ ಸಂದರ್ಭದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಅಂದಿನಿಂದಲೂ ಇಂದಿನವರೆಗೂ ಪ್ರತಿವಾದಿಯ ಕುಟುಂಬದವರಿಗೂ ಮತ್ತು ನಮಗೂ ಯಾವುದೇ ಮಾತುಕತೆ ಇರುವುದಿಲ್ಲ ಎಂದರೆ ನಿಜ.

ಪ್ರತಿವಾದಿ ಮತ್ತು ಅವರ ತಂದೆ ತಾಯಿ ಶೆಡ್ ನಲ್ಲಿ ವಾಸವಿದ್ದು ಸದರಿ ಶೆಡ್ ನ್ನು ಬಿಡಿಸಿಕೊಡುವಂತೆ ಕುದೇರು ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತಾರೆ. ದಾವಾ ಆಸ್ತಿಯು ಯಾರ ಹೆಸರಿನಲ್ಲಿ ಇರುತ್ತದೆ, ಯಾರಿಗೆ ಸೇರುತ್ತದೆ ಎಂದು ಕೇಳಿದಾಗ ಸಾಕ್ಷಿಯು ವಾದಿಯ ಹೆಸರಿಗೆ ಸೇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಶೆಡ್ ನಲ್ಲಿ ಪ್ರತಿವಾದಿಯು ವಾಸವಿರುತ್ತಾರೆ ಮತ್ತು ವಾದಿಗೆ ಸೇರಿರುವುದಿಲ್ಲ.

ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಮತ್ತು ಪ್ರತಿವಾದಿಯ ತಂದೆ ಹೆಸರು ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಕುಮ್ಮಕ್ಕಿನ ಮೇರೆಗೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಕುಟುಂಬಕ್ಕು ಮತ್ತು ನಮ್ಮ ಕುಟುಂಬಕ್ಕೂ ಜಗಳವಾಗಿದ್ದ ಕಾರಣ ಅವರ ವಿರುದ್ಧ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.